Code No. **35 Y**

**ಮುದ್ರಣ ಪರೀಕ್ಷೆ**

**PRINTING EXAMINATION**

# ಅಕ್ಷರ ಜೋಡಿಸುವ ಕೆಲಸ — ಪ್ರೌಢ ದರ್ಜೆ

**ಪತ್ರಿಕೆ – II (ಪ್ರಾಯೋಗಿಕ)**

# COMPOSITOR'S WORK — SENIOR GRADE

**Paper – II ( Practical )**

( Kannada & English Versions )

ಜನವರಿ, 2019 ] [ ಸಮಯ : 3 ಗಂಟೆಗಳು

[ ಗರಿಷ್ಠಾಂಕ : 40

***Instructions to the Room Supervisor / Examiner :***

Please check and record the time taken by each candidate to compose the given Kannada matter and enter the same in their respective submitted proofs with your initials.

1. ಅಕ್ಷರ ಜೋಡಣೆ ಹಿಡಿಕೆಯ ಚಿತ್ರ ಬರೆದು, ಭಾಗಗಳನ್ನು ಗುರುತಿಸಿ. 10

   Draw sketch of composing stick and explain its parts.

2. ಈ ಕೆಳಗೆ ಕೊಟ್ಟಿರುವ ಕನ್ನಡ ಭಾಷೆಯ ವಿಷಯವನ್ನು ಲಭ್ಯವಿರುವ ಅಚ್ಚುಮೊಳೆಗಳನ್ನು ಉಪಯೋಗಿಸಿ **24 ಪೈಕಾ** ಅಗಲಕ್ಕೆ ಅಕ್ಷರ ಜೋಡಣೆ ಮಾಡಿ ಮತ್ತು ಕರಡು ಪ್ರತಿಯನ್ನು ಸಲ್ಲಿಸಿ.

   Set the following Kannada matter using available point type for 24 pica width and submit a corrected proof. 30

**ಎಳೆಯರ ಮಾರ ಹೋಮ**

ಕ್ರೌರ್ಯ ಹಾಗೂ ಹೊಣೆಗೇಡಿತನಕ್ಕೆ ಈಚಿನ ದಿನಗಳಲ್ಲಿ ಅನ್ವರ್ಥನಾಮವಾಗಿರುವ ತಾಲಿಬಾನ್ ಪಡೆ ಪಾಕಿಸ್ತಾನದ ಪೇಶಾವರ್‌ನಲ್ಲಿ ಶಾಲೆಯೊಂದರ ಮೇಲೆ ಪರೀಕ್ಷೆಯ ದಿನವೇ ದಾಳಿ ನಡೆಸಿ ನೂರಕ್ಕೂ ಹೆಚ್ಚು ಮಕ್ಕಳ ಬಲಿ ತೆಗೆದುಕೊಂಡ ಘಟನೆಯನ್ನು ವರ್ಣಿಸಲು ಸರಿಯಾದ ಪದ ಜಗತ್ತಿನ ಯಾವ ಭಾಷೆಯಲ್ಲೂ ಸಿಗಲಿಕ್ಕಿಲ್ಲ. ಬರ್ಬರ, ಕ್ರೂರ, ಹೇಯ,

ಅಮಾನುಷ, ರಾಕ್ಷಸೀ ಕೃತ್ಯ ಹೀಗೆ ಯಾವ ಗುಣವಾಚಕವನ್ನು ಬಳಸಿದರೂ ಘಟನೆಯ ನಿಜವಾದ ಸ್ವರೂಪವನ್ನು ಚಿತ್ರಿಸಿದಂತೆ ಆಗುವುದಿಲ್ಲ.

ತಾಲಿಬಾನ್ ಗುಂಪಿಗೇ ಸೇರಿದಂಥಹ ಪಾಕಿಸ್ತಾನೀ ಸಂಘಟನೆಯೇ ಈ ಘೋರ ಕೃತ್ಯಕ್ಕೆ ಜವಾಬ್ದಾರಿಯನ್ನು ಹೊತ್ತಿರುವುದಂತೂ ಅಮಾನುಷ, ಅನಾಗರೀಕ ವರ್ತನೆಯ ಪರಮಾವಧಿ. ತಾಲಿಬಾನ್ ಪಾಕಿಸ್ತಾನದ ಸಂಘಟನೆಗೆ ಅಲ್ಲಿನ ಸೇನೆ ಕಿರುಕುಳ ಕೊಡುತ್ತಿತ್ತು ಎನ್ನುವುದನ್ನೇ ಈ ಘಟನೆಗೆ ಕಾರಣ ಎಂದು ಹೇಳುವಂತಿಲ್ಲ, ನಿಜ. ಪ್ರತೀಕಾರಕ್ಕೂ ಇತಿ–ಮಿತಿ ಇರಬೇಕು ಎಂದು ಹೇಳಬಹುದಾದರೂ, ಅದರಿಂದ ಏನನ್ನೂ ಸಾಧಿಸಿದಂತೆ ಆಗಲಿಲ್ಲ. ತಾಲಿಬಾನ್ ಸಂಘಟನೆಯ ನಾಯಕರಿಗೆ ಇಂತಹ ಬೈಗುಳದ ಚಿಂತೆಯೇ ಇಲ್ಲ. ಆ ದಿನ ನಡೆದ ಘಟನೆಯ ಗುರಿ ಮಕ್ಕಳೇ ಆಗಿರುವುದು ಸ್ಪಷ್ಟ. ಇದರಲ್ಲಿ ಅನುಮಾನವೇ ಇಲ್ಲ. ಸೇನೆಯ ಕಿರುಕುಳದ ಮಾತನ್ನು ತಾಲಿಬಾನ್ ವಕ್ತಾರರೆನಿಸಿಕೊಂಡವರು ಹೇಳಿದ್ದಾರೆ. ಆ ಕಾರಣಕ್ಕಾಗಿಯೇ ಸೇನೆಯ ಶಾಲೆ ಎಂದು ಹೆಸರಿಟ್ಟುಕೊಂಡಿರುವ ಶಾಲೆಯ ಮೇಲಿನ ದಾಳಿ ಅರ್ಥಹೀನ. ಅದನ್ನು ತಾಲಿಬಾನ್ ಹಾಗೂ ಆ ಸಂಘಟನೆಯ ಹಿತೈಷಿಗಳಿಗೆ ತಿಳಿಸುವವರು ಯಾರು ?

ಈ ಘಟನೆಯಲ್ಲಿ ಸಶಸ್ತ್ರವಾಗಿ ಪಾಲ್ಗೊಂಡವರು ಆರೇಳು ಜನ ಸಮವಸ್ತ್ರಧಾರಿಗಳು ಎನ್ನಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪಾಕಿಸ್ತಾನದ ಪ್ರಧಾನಿ ನವಾಜ್ ಷರೀಫ್ ಹಾಗೂ ಮಿಲಿಟರಿ ಅಧಿಕಾರಿಗಳ ಪ್ರತಿಕ್ರಿಯೆ ನಿರೀಕ್ಷಿಸಿದಂತೆಯೇ ಇದೆ. ತಾಲಿಬಾನ್ ಸಂಘಟನೆಯನ್ನು ಖಂಡಿಸುವುದಕ್ಕೆ ಹಾಗೂ ಅದರ ಎಲ್ಲಾ ಚಟುವಟಿಕೆಗಳನ್ನು ಹತ್ತಿಕ್ಕುವುದಕ್ಕೆ ಇದಕ್ಕಿಂತ ಸೂಕ್ತ ಸಂದರ್ಭ ಇನ್ನೊಂದಿರಲಾರದು.